



ಕಡಿಮೆಯಿರುತ್ತದೆ. ಆದರೆ, ಹಸುವಿನ ಹಾಲಿನಲ್ಲಿ ಶೇ.88ರಷ್ಟು ನೀರು, ಶೇ.3ರಷ್ಟು ಪ್ರೊಟೀನು ಮತ್ತು ಕೇವಲ ಶೇ.3ರಷ್ಟು ಕೊಬ್ಬಿನಂಶ ಇರುತ್ತದೆ. ಸೀಲುಗಳು ತಮ್ಮ ಮರಿಗಳಿಗೆ ದಿನದಲ್ಲಿ ನಾಲ್ಕೈದು ಬಾರಿ ಹಾಲೂಡಿಸುತ್ತವೆ.

ಮರಿಗಳಿಗೆ ಜನ್ಮವಿತ್ತ ಎರಡು ಮೂರು ವಾರದಲ್ಲೇ ಹೆಣ್ಣು ಸೀಲ್‌ಗಳು ಒಂದು ಅಥವಾ ಅದಕ್ಕಿಂತ ಹೆಚ್ಚು ಗಂಡುಗಳೊಡನೆ ಸಂಭೋಗಿಸುತ್ತವೆ. ಇದೇ ಕಾರಣಕ್ಕೆ ಡೊನ್ನ ನೂಕ್‌ನಲ್ಲಿ, ಗಂಡು ಸೀಲ್‌ಗಳು ಕೂಡ ಹೇರಳವಾಗಿ ನೋಡಸಿಗುತ್ತವೆ. ಸುಮಾರು 9ರಿಂದ 11 ತಿಂಗಳ ಕಾಲ ಹೆಣ್ಣು ಸೀಲ್‌ಗಳು ಗರ್ಭ ಹೊರುತ್ತವೆ. ಮೂರು ವರ್ಷದಿಂದ ಏಳು ವರ್ಷವಾಗುವ ವೇಳೆಗೆ ಈ ಮರಿಗಳು ಸಂತಾನೋತ್ಪತ್ತಿ ಶಕ್ತಿಯನ್ನು ಪಡೆಯುತ್ತವೆ.

ಇಂತಹ ದುಂಡಗಿನ ದೊಡ್ಡ ಮರಿಗಳನ್ನು ಗರ್ಭದಲ್ಲಿ ಹೊತ್ತು ದಂಡೆಗೆ ಬರುವ ಸೀಲ್‌ಗಳು ಮೆಲ್ಲಗೆ ತೆವಳುತ್ತ ಬಹುದೂರದವರೆಗೆ ಬಂದು 2ರಿಂದ 3 ವಾರಗಳ ಕಾಲ ಬಿಡಾರ ಹೂಡುತ್ತವೆ. ಪ್ರಶಸ್ತ ಸ್ಥಳ ಸಿಕ್ಕಾಗ ಮರಿಗಳಿಗೆ ಜನ್ಮ ನೀಡುತ್ತವೆ. ಅವುಗಳ ಪ್ರಸವ ವೇದನೆ ಕೂಡ ಹೆಚ್ಚು ಹೊತ್ತಿರುವುದಿಲ್ಲ. ತಮ್ಮ ಫ್ಲಿಪ್ಪರುಗಳನ್ನು ಬಡಿಯುತ್ತ, ಒಂದಿಷ್ಟು ಹೊರಳಾಡಿದ ನಂತರ ಕೆಲವೇ ಕೆಲವು ನಿಮಿಷಗಳಲ್ಲಿ ಮರಿಗಳು ಜನಿಸುತ್ತವೆ.



ಹುಟ್ಟಿದಾಗ ಇವುಗಳ ಮೈತುಂಬ ಬಿಳಿಯ ಉದ್ದ ತುಪ್ಪಟವಿರುತ್ತದೆ. ಅವುಗಳ ದೊಡ್ಡ ದೊಡ್ಡ ಕಪ್ಪು ಕಣ್ಣುಗಳು ಅವುಗಳನ್ನು ಮುದ್ದಾಗಿ ಕಾಣುವಂತೆ ಮಾಡುತ್ತವೆ. ತಮ್ಮ ಫ್ಲಿಪ್ಪರುಗಳನ್ನು ಬಡಿಯುತ್ತ, 'ಮ್...' 'ಮಾ' (ಅಮ್ಮಾ ಅಥವಾ ಮಮ್ ಎನ್ನುವಂತೆಯೇ) ಎನ್ನುವ ಶಬ್ದ ಹೊರಡಿಸುತ್ತ ನೆಲದಲ್ಲಿ ತಮ್ಮ ಮೊದಲ ಹೆಜ್ಜೆಯನ್ನಿಡುತ್ತವೆ.

ಆ ವೇಳೆಗಾಗಲೇ ಇದೇ ಸಮುದ್ರ ದಂಡೆಗೆ ಮರಿಗಳನ್ನಿಡಲು ಮರಳಿ ಬರಲು ಬೇಕಾದ ನಕ್ಷೆಯೂ ಅವುಗಳಿಗೆ ದೊರಕಿರುತ್ತದೆ. ಹೆಣ್ಣು ಸೀಲ್‌ಗಳು ತಮ್ಮ ಕೋಪ ಪ್ರದರ್ಶಿಸಲು 'ವೂ...'